ಕಡೂರು ತಾಲ್ಲೂಕಿನ ಅಯ್ಯನ ಕೆರೆ ಹಾಗೂ ಮಂಡಗದ ಕೆರೆಗಳನ್ನು ಪ್ರವಾಸೋದ್ಯಮ ಕೇಂದ್ರಗಳನ್ನಾಗಿ ಅಭಿವೃದ್ಧಿ ಪಡಿಸುವುದು.

೧೯೯೬. ಶ್ರೀ ಎಸ್. ಆರ್. ಲಕ್ಷ್ಮಯ್ಯ (ಬೀರೂರು).—ಮಾನ್ಯ ವಾರ್ತಾ ಯುವಜನ ಸೇವಾ ಕ್ರೀಡಾ ಹಾಗೂ ಪ್ರವಾಸೋದ್ಯಮ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ?

ಅ) ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕಿನ ಅಯ್ಯನ ಕೆರೆ ಮತ್ತು ಮದಗದ ಕೆರೆಗಳು ಇತಿಹಾಸ ಪ್ರಸಿದ್ಧವಾದ ಕೆರೆಗಳೆಂಬುದು ಸರ್ಕಾರದವರ ಗಮನದಲ್ಲಿದೆಯೇ.

ಆ) ಸದರಿ ಕೆರೆಗಳಲ್ಲಿ ಸದಾ ಕಾಲ ನೀರು ಇರುವುದರಿಂದ ಇಲ್ಲಿ ಒಂದು ಯಾಂತ್ರಿಕ ದೋಣಿ ಹಾಕಿವುದಕ್ಕೆ ಸರ್ಕಾರದವರು ಕ್ರಮ ಕೈಗೊಳ್ಳುವರೆ.

ಇ) ಈ ಕೆರೆಗಳನ್ನು ಪ್ರೇಕ್ಷಣೀಯ ಸ್ಥಳವನ್ನಾಗಿ ಅಭಿವೃದ್ಧಿಪಡಿಸಲು ಸರ್ಕಾರದವರು ಕ್ರಮ ತೆಗೆದುಕೊಳ್ಳುವರೆ.

ಶ್ರೀ ಜೀವರಾಜ ಆಳ್ವ (ವಾರ್ತಾ ಯುವಜನ ಸೇವಾ ಕ್ರೀಡಾ ಹಾಗೂ ಪ್ರವಾಸೋದ್ಯಮ ದ್ಯಮ ರಾಜ್ಯ ಮಂತ್ರಿಗಳು).—

ಅ) ಹೌದು.

ಆ) ಮತ್ತು ಇ) ಪ್ರವಾಸಿ ಕೇಂದ್ರಗಳನ್ನಾಗಿ ಅಭಿವೃದ್ಧಿ ಪಡಿಸುವುದಕ್ಕೋಸ್ಕರ ಪ್ರವಾಸೋ ಇಲಾಖೆಯಂ ಗುರುತಿಸಲಾದ ಸ್ಥಳಗಳ ಪಟ್ಟಿಯಲ್ಲಿ, ಈ ಕೆರೆಗಳು ಸೇರಿಲ್ಲ.

ಸಣ್ಣ ಪತ್ರಿಕೆಗಳ ಅಭಿವೃದ್ಧಿ ಹಾಗೂ ಬೆಳವಣಿಗೆ ಸಲಹಾ ಸಮಿತಿಯ ವರದಿ.

೧೯೧೨. ಶ್ರೀ ಸಿ. ಎಸ್. ಬಾಸ್ಕರಪ್ಪ (ಬೆಳ್ಳಾವಿ).—ಮಾನ್ಯ ವಾರ್ತಾ ಪ್ರವಾಸ ಯುವಜನ ಸೇವಾ ಕ್ರೀಡಾ ಹಾಗೂ ಪ್ರವಾಸೋದ್ಯಮಗಳ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ?

ಅ) ಸರ್ಕಾರದವರು ಸಣ್ಣ ಪತ್ರಿಕೆಗಳ ಅಭಿವೃದ್ಧಿ ಮತ್ತು ಬೆಳವಣಿಗೆ ಸಲಹಾ ಸಮಿತಿಯು ತಾತ್ಕಾಲಿಕ ವರದಿಯನ್ನು ನೀಡಿದೆಯೇ?

ಆ) ನೀಡಿದ್ದಲ್ಲಿ ಆ ಬಗ್ಗೆ ಏನಾದರೂ ಕ್ರಮಕೈಗೊಳ್ಳಲಾಗಿದೆಯೇ?

ಶ್ರೀ ಜೀವರಾಜ ಆಳ್ವ (ಮಾನ್ಯ ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವಾ ರಾಜ್ಯ ಸಚಿವರು).—

ಅ) ಹೌದು.

ಆ) ವರದಿಯು ಸರ್ಕಾರದ ಪರಿಶೀಲನೆಯಲ್ಲಿದೆ.

ರಾಜ್ಯದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ಪ್ರಾಥಮಿಕ ಆರೋಗ್ಯ ಘಟಕಗಳು.

೧೯೪೯. ಶ್ರೀ ಬಿ. ಎ. ಉಪ್ಪಿನ್ (ಕುಂದಗೋಳ).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ?

ಅ) ೩೧-೧೨-೧೯೮೫ ರಂದು ರಾಜ್ಯದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಘಟಕಗಳೆಷ್ಟು? (ಜಿಲ್ಲಾವಾರು ಸಂಖ್ಯೆ, ಜನಸಂಖ್ಯೆ ಹಾಗೂ ವಿಸ್ತೀರ್ಣದೊಂದಿಗೆ ಒದಗಿಸುವುದು).

ಆ) ಯಾವ ಆಧಾರದ ಮೇಲೆ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಪ್ರಾಥಮಿಕ ಆರೋಗ್ಯ ಘಟಕಗಳನ್ನು ಪ್ರಾರಂಭಿಸಲಾಗುವುದು?

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ರಾಜ್ಯದಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಖ್ಯೆ ೩೬೫ ಮತ್ತು ಪ್ರಾಥಮಿಕ ಆರೋಗ್ಯ ಘಟಗಳ ಸಂಖ್ಯೆ ೧,೩೦೮. (ವಿವರಗಳನ್ನು ಲಗತ್ತಿಸಿದ ಪಟ್ಟಿಯಲ್ಲಿ ಕೊಡಲಾಗಿದೆ.)

ಆ) ಭಾರತ ಸರ್ಕಾರದ ಮಾರ್ಗ ಸೂಚಿ ಪ್ರಕಾರ ೩೦೦೦೦ ಜನಸಂಖ್ಯೆಗೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸ್ಥಾಪಿಸಬೇಕು. ೧೫,೦೦೦ ಜನ ಸಂಖ್ಯೆಯುಳ್ಳ ರಿಕ್ತ ಕ್ಷೇತ್ರಗಳಿಗೆ ನಿರ್ದಿಷ್ಟ ನಿಬಂಧನೆಗಳೊಂದಿಗೆ ಒಂದು ಪ್ರಾಥಮಿಕ ಆರೋಗ್ಯ ಘಟಕವನ್ನು ಮಂಜೂರು ಮಾಡಲಾಗುವುದು.

ರಾಜ್ಯದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಪ್ರಾಥಮಿಕ ಆರೋಗ್ಯ ಘಟಕಗಳ ಜಿಲ್ಲಾವಾರು ಸಂಖ್ಯೆ, ಜನಸಂಖ್ಯೆ ಹಾಗೂ ವಿಸ್ತೀರ್ಣದ ವಿವರಗಳ ಪಟ್ಟಿ.

ಕ್ರ ಸಂ	ಜಿಲ್ಲೆ	ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಖ್ಯೆ	ಪ್ರಾಥಮಿಕ ಆರೋಗ್ಯ ಘಟಕಗಳ ಸಂಖ್ಯೆ	೧೯೮೧ನೇ ಜನಗಣತಿಯ ಪ್ರಕಾರ ಜನಸಂಖ್ಯೆ			ವಿಸ್ತೀರ್ಣ ಚದರ ಕಿ. ಮೀಟರ್
				ನಗರ ಪ್ರದೇಶ	ಗ್ರಾಮೀಣ ಪ್ರದೇಶ	ಒಟ್ಟು ಜನಸಂಖ್ಯೆ	
೧	೨	೩	೪	೫	೬	೭	೮
೧	ಬೆಂಗಳೂರು	೨೬	೧೧೩	೩೧೯೩೨೬೬	೧೭೫೬೩೪೪	೪೯೪೯೬೧೦	೮೦೦೫
೨	ಚಿತ್ರದುರ್ಗ	೧೮	೮೫	೪೧೭೭೪೫	೧೫೫೭೭೫೬	೧೭೭೭೪೯೯	೧೦೮೫೨
೩	ಕೋಲಾರ	೨೧	೭೪	೪೨೭೮೫೩೧	೧೪೪೭೬೬೭	೧೯೦೫೪೯೨	೮೨೨೩
೪	ಶಿವಮೊಗ್ಗ	೧೮	೮೫	೪೨೬೭೮೮೦	೧೨೩೦ ೫೧	೧೫೫೬೭೩೧	೧೦೫೫೩
೫	ತುಮಕೂರು	೨೨	೮೬	೨೬೨೨೮೪೪	೧೭೦೫೫೫೭೦	೧೯೭೭೮೫೫೪	೧೦೫೯೩
೬	ಬೆಳಗಾಂ	೨೫	೮೦	೬೭೧೪೮೧೮	೨೩೦೯೦೨೨	೨೯೮೦೪೪೦	೧೩೪೧೫
೭	ಬಿಜಾಪುರ	೨೫	೬೫	೫೭೮೬೨೮	೧೮೨೩೧೫೫೪	೨೪೦೨೮೮೨	೧೭೦೬೯
೮	ಧಾರವಾಡ	೨೯	೭೦	೧೦೨೮೫೩೫೮	೧೯೦೭೭೯೯	೨೯೪೫೮೮೭	೧೩೭೭೦
೯	ಉತ್ತರ ಕನ್ನಡ	೧೬	೪೦	೨೭೧೭೯೩	೮೦೦೨೪೧	೧೦೭೭೦೪೪	೧೦೮೯೧
೧೦	ಗುಲ್ಬರ್ಗ	೨೪	೫೯	೪೬೫೭೩೨	೧೬೦೪೯೧೧	೨೦೪೧೦೬೪೩	೧೬೨೨೪
೧೧	ಬಳ್ಳಾರಿ	೧೫	೪೧	೪೯೨೧೬೦	೯೯೭೦೬೫	೧೪೮೯೨೬೫	೮೪೮೫
೧೨	ಬೀದರ್	೧೧	೨೨	೧೭೭೪೧೬	೮೧೮೨೬೫	೯೯೫೬೦	೫೪೬೮
೧೩	ರಾಯಚೂರು	೧೯	೪೯	೬೪೫೭೬೮೮	೧೬೦೪೯೧೧	೧೯೪೮೬೬೯	೧೪೦೧೭
೧೪	ಮೈಸೂರು	೨೬	೧೧೧	೭೧೧೨೬೭	೧೮೮೪೫೫೩೩	೨೫೯೫೯೦೦	೧೧೯೫೪
೧೫	ಮಂಡ್ಯ	೧೬	೭೧	೨೨೦೦೨೫	೧೨೯೧೮೮೪	೧೪೧೮೧೯೯	೪೪೬೧
೧೬	ಹಾಸನ	೧೬	೮೨	೧೯೮೪೭೨	೧೧೫೮೫೫೪೨	೧೩೫೭೦೧೪	೬೮೧೪
೧೭	ಚಿಕ್ಕಮಗಳೂರು	೧೨	೬೩	೧೫೯೮೭೯	೭೫೧೮೯೦	೯೧೧೭೬೯	೭೨೧೧
೧೮	ಕೊಡಗು	೬	೧೧	೭೧೬೬೩	೩೯೦೨೨೫	೪೬೧೮೮೮	೪೧೦೨
೧೯	ದಕ್ಷಿಣ ಕನ್ನಡ	೨೦	೯೩	೫೮೧೬೭೧	೧೭೯೫೬೯೧	೨೩೭೬೭೨೪	೮೪೪೧
	ಒಟ್ಟು	೩೬೫	೧೩೦೮	೧೦೭೨೯೬೦೬	೨೬೪೧೬೧೦೮	೩೭೧೧೩೫೭೧೪	೧೯೧೭೯೧